

ಡಾ.ವಿನೋದ ಛೆಬ್ಬಿ

ಪದಗಳ ಮೂಲಕ ವ್ಯಕ್ತಪಡಿಸುವ ಪ್ರಣಯವು ವಿಶಿಷ್ಟವಾದ ಕಾಮೋದ್ರೇಕ ಉಂಟುಮಾಡಬಲ್ಲುದು!

# 290: ಹೊಸ ದಾರಿ - 30

ಎಲ್ಲವನ್ನೂ ಕಲಿಸುವ ತಾಯಂದೆಯರು ಲೈಂಗಿಕ ಕ್ರಿಯೆಯ ಬಗೆಗೂ ಕಲಿಸಿದ್ದರೆ ನಮ್ಮ ಕಾಮಸಂಬಂಧಗಳು ಬೇರೆ ಹಾದಿಯನ್ನೇ ಹಿಡಿಯುತ್ತಿದ್ದುವು ಎಂದು ಹೋದಸಲ ಕಂಡುಕೊಂಡೆವು. ಕಾಮಸಂಬಂಧಕ್ಕೆ ಬರುವಾಗ ಇನ್ನೊಂದು ವಿಷಯ ನೆನಪಾಗುತ್ತಿದೆ. ಅದನ್ನು ಮಾಯಾಮನೋಜ ದಂಪತಿಯಿಂದ ಶುರುಮಾಡೋಣ. ಪ್ರಸಂಗ: ತಡರಾತ್ರಿಯ ಚಲನಚಿತ್ರದ ನಂತರ ಟೀವಿಯ ಜತೆಗೆ ಮನೆಯನ್ನು ಕತ್ತಲುಗೊಳಿಸುತ್ತ ಮಾಯಾ ಹೇಳುತ್ತಾಳೆ:

ಹೀರೋ ಹೀರೋಯಿನ್‌ಗೆ ಎಷ್ಟೊಂದು ಪ್ರೀತಿ ತೋರಿಸಿದ, ಅಲ್ವಾ?

ಮನೋಜ: ಸಿನಿಮಾ ಅಲ್ಲವಾ? ಅದಕ್ಕೆ. ನಿಜಜೀವನದಲ್ಲಿ ಕವನ ಕಟ್ಟಿ ಹಾಡಲು ಆಗುತ್ತದೆಯೆ?

ಮಾಯಾ ಏನೋ ಹೇಳಲು ಹೊರಟವಳು ಅಂತರ್ಮುಖಿ ಆಗುತ್ತಾಳೆ. ಸೊಂಟದ ಸುತ್ತಲೂ ಬಳಸಿದ ಮನೋಜನ ತೋಳಿನಿಂದ ಅವಳ ಮನಸ್ಸು ಪುಳಕಗೊಳ್ಳುವುದಿಲ್ಲ. ಅವನ ಅಪ್ಪುಗೆ ಬೆಚ್ಚಗಿದ್ದರೂ ಅನುಭವಕ್ಕೆ ಬರುವುದಿಲ್ಲ. ಇತ್ತ ಮನೋಜನು ನಾಯಕನಂತೆ ಮಾತುಗಾರನಾಗಿದ್ದರೆ ಮಾಯಾಳನ್ನು ಒಲಿಸಿಕೊಳ್ಳಬಹುದಿತ್ತು ಎಂದುಕೊಳ್ಳುತ್ತಾನೆ. ಇಬ್ಬರೂ ಅತೃಪ್ತಿಯನ್ನು ಹೊದ್ದುಕೊಂಡು ಮೈಗೆ ಮೈ ಅಂಟಿಯೂ ಅಂಟದಿರುವಂತೆ ಮಲಗುತ್ತಾರೆ.

ಹೆಚ್ಚಿನ ದಂಪತಿಗಳಲ್ಲಿ ಹೀಗೆಯೇ ಆಗುತ್ತದೆ. ಅನೇಕ ಹೆಂಗಸರು ತಮಗೇನು ಬೇಕೆಂದು ಬಾಯಿಬಿಟ್ಟು ಹೇಳದೆ ಗಂಡಸೇ ಅರ್ಥಮಾಡಿಕೊಳ್ಳಲೆಂದು ನಿರೀಕ್ಷಿಸುತ್ತಾರೆ; ಗಂಡಸರು ತಮಗೆ ತಿಳಿದಂತೆ ಯೋನಿಶಿಶ್ನದ ಸೆಣಸಾಟ ನಡೆಸುತ್ತಾರೆ. ಪರಿಣಾಮ, ಕೆಲಕಾಲದ ನಂತರ ಕಾಮಕೂಟ ರೋಚಕತೆ ಕಳೆದುಕೊಂಡು ಹಲ್ಲುಜ್ಜಿಕೊಳ್ಳುವಷ್ಟು ಯಾಂತ್ರಿಕವಾಗುತ್ತದೆ. ಒಬ್ಬರಿಗೆ ಬೇಗ ಮುಗಿಯಿತು ಎನ್ನಿಸಿದರೆ ಇನ್ನೊಬ್ಬರಿಗೆ ಬೇಗ ಮುಗಿದರೆ ಸಾಕು ಎನ್ನಿಸುತ್ತದೆ. ಆಗ ಹೆಚ್ಚಿನವರು ಏನು ಮಾಡುತ್ತಾರೆ? ಶಾರೀರಿಕ ಸಾಮರ್ಥ್ಯವನ್ನೂ ಕಾಮಕ್ರಿಯೆಯ ಕೌಶಲ್ಯವನ್ನೂ ಒಲಿಂಪಿಕ್ ಮಟ್ಟಕ್ಕೆ ತರಲು ನೋಡುತ್ತಾರೆ. ಆದರೆ ಶರೀರವು ಪ್ರತಿಕ್ರಿಯಿಸುವುದಕ್ಕೂ ಮಿತಿಯಿದೆ. ಅದರಲ್ಲಂತೂ ಸಂಗಾತಿಯು ಸ್ಪಂದಿಸದಿದ್ದರೆ ವಿರಕ್ತಿಯೇ ಗತಿ. ಸಮಸ್ಯೆ ಇಲ್ಲೇ ಇದೆ: ನಾವು ಕಾಮಕೂಟಕ್ಕೆ ಚೈತನ್ಯ ತುಂಬಲು ಹೊರಡುತ್ತೇವೆಯೇ ವಿನಾ ಕಾಮಸಂಬಂಧಕ್ಕಲ್ಲ!

ಕಾಮಸಂಬಂಧಕ್ಕೆ ಚೈತನ್ಯ ತುಂಬುವುದಕ್ಕೆ ಹಲವು ರೀತಿಗಳಿವೆ. ಅದರಲ್ಲೊಂದು ಮಾತು. ಮಾತು ಹೇಗೆ ಮುಖ್ಯ ಪಾತ್ರ ವಹಿಸುತ್ತದೆ? ಭಾಷೆ ಎಂಬುದು ಅತ್ಯಂತ ವಿಕಾಸ ಹೊಂದಿದೆ. ಅದಕ್ಕಾಗಿ ಮೆದುಳಿನಲ್ಲಿ ವಿಶಾಲವಾದ ಜಾಗವಿದೆ (**Broca's area**). ಪ್ರತಿ ಭಾಷೆಯಲ್ಲೂ ಸಮಾನಾರ್ಥ ಹಾಗೂ ದ್ವಂದ್ವಾರ್ಥದ ಪದಗಳು ಹೇರಳವಾಗಿವೆ. ಅವ್ಯಕ್ತವನ್ನು ವ್ಯಕ್ತಗೊಳಿಸಲು ಭಾಷೆಯಷ್ಟು ಪರಿಣಾಮಕಾರಿ ಸಾಧನ ಬೇರೊಂದಿಲ್ಲ (ನಾನು ನಿಮ್ಮೊಂದಿಗೆ ಅದನ್ನೇ ಮಾಡುತ್ತಿದ್ದೇನೆ).

ಸೂಕ್ತಮಾತು ಕಾಮಕೂಟಕ್ಕೂ ಕಾಮಕೂಟವು ಸೂಕ್ತಮಾತಿಗೂ ಪ್ರಚೋದನೆ ಕೊಡುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಇದು ಸುಲಲಿತವಾಗಿ ಯಾಕೆ ನಡೆಯುವುದಿಲ್ಲ ಎಂದರೆ, ಮಾತುಗಳನ್ನು ಕೇವಲ ಕಾಮಕೂಟದ ಪ್ರಸ್ತಾಪಕ್ಕಾಗಿ ಬಳಸುತ್ತೇವೆ; ನಂತರ ಮೌನವಾಗಿ ಮುಂದುವರಿಸಿ, ಅದಾದಮೇಲೆ ನಿಲ್ಲಿಸಿಬಿಡುತ್ತೇವೆ — ಮುಂದಿನ ಸಲದವರೆಗೂ! ವಿಚಿತ್ರವೆಂದರೆ, ವ್ಯವಹಾರದಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತೇವೆ. ಉದಾಹರಣೆಗೆ, ರಾಶಿ ಕೆಲಸವಿದ್ದರೂ ಒಮ್ಮೆಲೇ ಧುಮುಕುವುದರ ಬದಲು ಅದರ ಬಗೆಗೆ ನಿರರ್ಗಳವಾಗಿ ಮಾತಾಡುತ್ತೇವೆ — ಕೆಲಸ ಪೂರ್ತಿ ಮಾಡದಿದ್ದರೂ! ಹಾಗೆಯೇ, ಲೈಂಗಿಕ ವಿಷಯಗಳ ಬಗೆಗೂ ಮನದಲ್ಲಿ ಇರುವುದನ್ನು ಬಾಯಿಬಿಟ್ಟು ಬಣ್ಣಿಸಿದರೆ ನೀಡುವ ಅನುಭವವೇ ಬೇರೆ. ಪದಗಳಲ್ಲೇ ಕಾಮತೃಪ್ತಿಯ ಸಾಮರ್ಥ್ಯವಿದ್ದು, ಅದಕ್ಕೆಂದೇ ಶೃಂಗಾರ ಸಾಹಿತ್ಯ ಹುಟ್ಟಿಕೊಂಡಿದೆ. ಮಾತಾಡುವ ಬುದ್ಧಿವಂತರನ್ನು ಕಾಮಿಸುವುದಕ್ಕೆ ಇಂಗ್ಲೀಷಿನಲ್ಲಿ **sapiosexuality** ಎಂಬ ಪದವೇ ಇದೆ.

ಕಾಮಬಾಂಧವ್ಯದಲ್ಲಿ ಮನದಾಳದ ಮಾತನ್ನು ಹೇಗೆ ಹೊರತೆಗೆದು ಬಳಸಬಹುದು? ಉದಾಹರಣೆಗೆ: ನೀನು ಮಾತಿಲ್ಲದೆ ನೇರವಾಗಿ ಕಾಮಕ್ರಿಯೆಗೆ ಕೈಹಾಕಿದಾಗ ನನ್ನನ್ನಲ್ಲ, ನನ್ನ ಮೈಯನ್ನು ಇಷ್ಟಪಡುತೀಯಾ ಎಂದೆನಿಸುತ್ತದೆ. ಬದಲಾಗಿ, ನಿನ್ನ ಮನಸ್ಸಿನಲ್ಲಿ ನಡೆಯುವುದನ್ನು ಹಂಚಿಕೊಂಡರೆ ನನ್ನೊಡನೆ ಇದ್ದೀಯಾ ಎಂದೆನಿಸುತ್ತದೆ. ನಾವಿಬ್ಬರೂ ಒಟ್ಟಿಗೆ ಇರುವಾಗಲೆಲ್ಲ ಮುನ್ನಲಿವಿನಲ್ಲಿ ಸಾಕೆನ್ನುವಷ್ಟು ಹೊತ್ತು ತೊಡಗುವುದು ರೋಚಕ ಅನುಭವ ಕೊಡುತ್ತದೆ. ನಂತರದ ಕಾಮಕೂಟ ಅಪ್ಯಾಯಮಾನ ಆಗಿರುತ್ತದೆ.

ಕಾಮಕೂಟದಲ್ಲಿ ನಿನ್ನೊಡನೆ ಬೆಸೆದುಕೊಂಡು ನನ್ನತನ ಕಳೆದುಕೊಳ್ಳುತ್ತೇನೆ, ನಂತರ ಮರಳಿ ಪಡೆಯುತ್ತೇನೆ. ಹೀಗೆ ನಮ್ಮನ್ನು ಕಳೆದುಕೊಳ್ಳುವುದು ಹಾಗೂ ಮರಳಿ ಪಡೆಯುವುದು ನನಗಿಷ್ಟ.

ಬಾ, ನಾವಿಬ್ಬರೂ ಕೂತುಕೊಂಡು ಯಾವಯಾವ ವಿಧಗಳಲ್ಲಿ ಶಾರೀರಿಕ ಸುಖವನ್ನು ಅನುಭವಿಸಬಹುದು ಎಂದು ಪಟ್ಟಿ ಮಾಡೋಣ.

ನೀನೇ ಬೇರೆ, ನಾನೇ ಬೇರೆ; ಆದರೆ ಕೂಟದಲ್ಲಿ ಎಷ್ಟು ಒಂದಾಗಿರುತ್ತೇವೆ ಎಂದು ನೆನೆಸಿಕೊಂಡರೆ ನಿನ್ನನ್ನು ಕಟ್ಟಿಕೊಂಡದ್ದಕ್ಕೆ ಸಾರ್ಥಕ ಎನಿಸುತ್ತದೆ.

ಈ ಪ್ರಸಂಗದಲ್ಲಿ ಮನೋಜ 'ನನಗೆ ಹಾಡಲು, ಕುಣಿಯಲು ಗೊತ್ತಿಲ್ಲ. ಆದರೆ ನಿನ್ನ ಸೊಂಟ ಬಳಸಿ ಹಿಡಿದುಕೊಳ್ಳಲು ಜೀವ ಕಾತರಿಸುತ್ತದೆ!' ಎಂದರೆ ಸಾಕೆಸಾಕಿತ್ತು!

ಇದೆಲ್ಲ ಬುದ್ಧಿವಂತರಿಗೆ ಆಯಿತು. ಉಳಿದವರಿಗೆ? ಸಾಹಿತ್ಯ ಬೇಕಾಗಿಲ್ಲ, ಆಡುಭಾಷೆಯೇ ಸಾಕು. ಮನದಲ್ಲಿ ಇರುವುದನ್ನು ಬಿಚ್ಚಿ ತೋರಿಸಲು ಹೊಸ ಪದಗಳನ್ನು ಹುಡುಕಿ. ಹೋಲಿಕೆಯ ಅಥವಾ ದ್ವಂದ್ವಾರ್ಥದ ಪದಗಳನ್ನು ರೂಢಿಸಿಕೊಳ್ಳಿ. ನಿಮ್ಮ ಹಾಗೂ ಸಂಗಾತಿಯ ಖಾಸಗಿ ಭಾಗಗಳ ಹೆಸರುಗಳನ್ನು ಮಡಿವಂತಿಕೆ ಬಿಟ್ಟು ಆಡುಭಾಷೆಯಲ್ಲಿ ಉಚ್ಚರಿಸಿ. ಸ್ವರದಲ್ಲಿ ಪಿಸುಗುಟ್ಟುವಿಕೆ, ಕಂಪನ ಇರಲಿ. ಇದಕ್ಕಾಗಿ ಪ್ರತಿದಿನವೂ ಕನಿಷ್ಠ ಅರ್ಧತಾಸು ಮೀಸಲಾಗಿಡಿ.

ಸಂಗಾತಿಗೆ ನೀವು ಹೇಗೆ ಆಕರ್ಷಿತರಾದಿರಿ ಎನ್ನುವುದನ್ನು ಮಾತಿನಲ್ಲಿ ವಿವರಿಸುವುದು ಇನ್ನೊಂದು ರೀತಿ. ಅದರಲ್ಲಿ ಹೊಗಳಿಕೆ ಇರಲಿ. ಕೂಟದಲ್ಲಿ ಏನೇನು ಬಯಸುವಿರಿ ಎಂಬುದನ್ನು ಮಾತುಗಳಲ್ಲಿ ತಿಳಿಸಿ. ಸಂಗಾತಿಯ ಬಗೆಗಿರುವ ಪ್ರೀತಿ–ಪ್ರೇಮ, ಪ್ರಣಯ–ಕಾಮವನ್ನು ಪದಗಳಲ್ಲಿ ವ್ಯಕ್ತಪಡಿಸುತ್ತಿದ್ದರೆ ಮಲಗುವ ಕೋಣೆಯಲ್ಲಷ್ಟೇ ಅಲ್ಲ, ಅದರ ಹೊರಗೂ ಅನ್ಯೋನ್ಯತೆ ಬೆಳೆಯುತ್ತದೆ. ಇದರ ಸಾರ ಪದಗಳ ಮೂಲಕ ಪ್ರಣಯ. ಕಾಮಕ್ರಿಯೆಯ ಬಗ್ಗೆ ಮಾತಾಡುವುದು ಕೂಡ ಶಾರೀರಿಕವಾಗಿ ಉದ್ರೇಕ ಗೊಳಿಸುತ್ತದೆ. ಉದಾಹರಣೆಗೆ, 'ನೀನು ಸಿಟ್ಟಿನಲ್ಲಿ ಏದುಸಿರು ಬಿಡುತ್ತಿರುವಾಗ ನಿನ್ನೆದೆಯ ಏರಿಳಿತವನ್ನು ನೋಡುತ್ತಿದ್ದರೆ ಕಾಮಕೂಟದಲ್ಲಿ...' ಎಂದು ಮುಂತಾಗಿ ಹೇಳಿದರೆ ಹೇಗಿರುತ್ತದೆ?

ಜಗತ್ಪಸಿದ್ಧ ನಾಟಕ 'ವಜೈನಲ್ ಮೊನೊಲೋಗ್ಸ್'ನಲ್ಲಿ ಬೆಲೆವೆಣ್ಣನ್ನು ಪುರುಷನೊಬ್ಬ ಸಂದರ್ಶಿಸುತ್ತಾನೆ. ದೂರ ಕುಳಿತು ಆಕೆಯ ಜನನಾಂಗವನ್ನು ದಿಟ್ಟಿಸುತ್ತ ಸ್ವಲ್ಪವೇ ಮಾತಾಡುತ್ತಾನೆ. ಗಂಡುಗಳಿಗೆಲ್ಲ ನಿರ್ಭಾವುಕತೆಯಿಂದ ಮೈಯೊಪ್ಪಿಸುತ್ತಿದ್ದ ಆಕೆಗೆ ಕಾಮಭಾವ ಉಕ್ಕುತ್ತದೆ!

ಪ್ರಯೋಗ 25: ಸಂಗಾತಿಯಿಂದ ತಿರಸ್ಕರಿಸಲ್ಪಡುವ ಭಯವನ್ನು ತೆಗೆದುಹಾಕಲು ಸಂಗಾತಿಯೊಡನೆ ಮುಂಚೆಯೆ ಮಾತಾಡಿಕೊಳ್ಳಿ. ಸಂಗಾತಿಯನ್ನು ವರ್ಣಿಸಲು ಪ್ರಯತ್ನಿಸಿ. ಸಿನೆಮಾ ಹಾಡುಗಳ ಪದಗಳ ಬದಲು ನಿಮಗಿಷ್ಟವಾದ ಪದಗಳನ್ನು ಬಳಸಿ ಹಾಡಿ. ಮೈಮುಟ್ಟದೆ ಖಾಸಗಿ ಭಾಗಗಳ ವರ್ಣನೆಯನ್ನು ಮಾಡಿ. ಒಂದೇ ಮನೆಯಲ್ಲಿದ್ದೂ ಪ್ರೇಮಿಗಳಂತೆ ಬೇರೆಬೇರೆ ಕೋಣೆಗಳಲ್ಲಿ ಕುಳಿತು ಫೋನ್‌ನಲ್ಲಿ ಪ್ರಣಯದಾಟವಾಡಿ. ಯೋಚಿಸಲು ಸಮಯವಿಲ್ಲವೇ? ಯಂತ್ರದಂತೆ ಮನೆಗೆಲಸ / ಹೊರಗೆಲಸ ಮಾಡುತ್ತಿರುವಾಗ ತಲೆಯೋಡಿಸಿ ಹೊಸಪದ ಹುಡುಕುತ್ತಿರಿ!

ವಾರದ ಪ್ರಶ್ನೆಗಳು: ಕಾಮುಕತನದ ಮಾತುಗಳಿಗೂ ಕಾಮಕ್ರಿಯೆಗೂ ಸಂಬಂಧವಿದೆಯಲ್ಲವೆ? ಆದರೂ ಇವುಗಳನ್ನು ಜೋಡಿಸುವ ಕೊಂಡಿ ಕಳಚಿದ್ದು ಹೇಗೆ? ಬೀದಿಯ ಜಗಳಗಳಲ್ಲಿ ಬಳಸುವ ಭಾಷೆ ಅಶ್ಲೀಲವೆಂದೆ? ಹಾಗಿದ್ದಲ್ಲಿ ಅದರಿಂದ ಪ್ರತ್ಯೇಕಗೊಳ್ಳಲು ಆಗುತ್ತದೆಯೋ ನೋಡಿ. ಜಾರಿಗೊಳಿಸುವುದು ಪ್ರಶ್ನೆಯಾದರೆ ನನ್ನೊಡನೆ ಹಂಚಿಕೊಳ್ಳಿ.

ಸಂಪರ್ಕಕ್ಕೆ: 8494933888; Email: vinod.chebbi@gmail.com